# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2010-11ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ – 'ಮೀನುಗಾರಿಕೆ ತರಬೇತಿ ಮತ್ತು ವಿಸ್ತರಣೆ' ಯೋಜನೆಯಡಿ ಅನುದಾನ ಬಿಡುಗಡೆಗೊಳಿಸುವಿಕೆ.

ಓದಲಾಗಿದೆ:- (1) ಪತ್ರ ಸಂಖ್ಯೆ.12012/12/12/2009-FY (WU) ದಿನಾಂಕ:01-09-2010.

(2) ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ: ಎಫ್‌ಡಿ/13/ಬಿಜಿಎಲ್/2010 ದಿನಾಂಕ:08-09-2010.

(3) ಪತ್ರ ಸಂಖ್ಯೆ:ಟಿಆರ್‌ಜಿ/23/2010-11 ದಿನಾಂಕ:06-10-2010.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಭಾರತ ಸರ್ಕಾರದ ಪತ್ರದಲ್ಲಿ ಕೇಂದ್ರ ಪುರಸ್ಕೃತ – 'ಮೀನುಗಾರಿಕೆ ತರಬೇತಿ ಮತ್ತು ವಿಸ್ತರಣೆ' ಯೋಜನೆ ಅನುಷ್ಠಾನಕ್ಕೆ 2010-11ನೇ ಸಾಲಿನಲ್ಲಿ ಒದಗಿಸಲಾದ ಒಟ್ಟು ಅನುದಾನ ರೂ.10.00 ಲಕ್ಷಗಳಲ್ಲಿ ಕೇಂದ್ರದ ಪಾಲು ರೂ.8.00 ಲಕ್ಷಗಳನ್ನು ಬಿಡುಗಡೆಗೊಳಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರದಲ್ಲಿ ಕೇಂದ್ರ ಸರ್ಕಾರವು ಬಿಡುಗಡೆಗೊಳಿಸಿದ ರೂ.8.00 ಲಕ್ಷಗಳನ್ನು ರಾಜ್ಯ ಸರ್ಕಾರದ ಖಜಾನೆಗೆ ದಿನಾಂಕ:07-09-2010 ರಂದು ಜಮೆ ಆಗಿರುವ ಬಗ್ಗೆ ದೃಢೀಕರಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಮೀನುಗಾರಿಕೆ ನಿರ್ದೇಶಕರು ಸದರಿ ಯೋಜನೆಗೆ 2010-11ನೇ ಸಾಲಿನಲ್ಲಿ ಒದಗಿಸಲಾದ ರೂ.10.00 ಲಕ್ಷಗಳಲ್ಲಿ ಕೇಂದ್ರದ ಪಾಲು ರೂ.8.00 ಲಕ್ಷ ಹಾಗೂ ರಾಜ್ಯದ ಪಾಲು ರೂ.2.00 ಲಕ್ಷ ಸೇರಿ ಒಟ್ಟು ರೂ.10.00 ಲಕ್ಷ ಅನುದಾನ ಬಿಡುಗಡೆಗೊಳಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 153 ಮೀಇಯೋ 2010, ಬೆಂಗಳೂರು ದಿನಾಂಕ:21-12-2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕೇಂದ್ರ ಪುರಸ್ಕೃತ –"ಮೀನುಗಾರಿಕೆ ತರಬೇತಿ ಮತ್ತು ವಿಸ್ತರಣೆ" ಯೋಜನೆಯನ್ನು 2010-11ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕೇಂದ್ರದ ಪಾಲು ರೂ.8.00ಲಕ್ಷ ಹಾಗೂ ರಾಜ್ಯದ ಪಾಲು ರೂ.2.00ಲಕ್ಷ ಸೇರಿ ಒಟ್ಟು ರೂ.10.00 ಲಕ್ಷ (ಹತ್ತು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಈ ಕೆಳಕಂಡಂತೆ ಬಿಡುಗಡೆಗೊಳಿಸಿದೆ.

(ರೂ.ಲಕ್ಷಗಳಲ್ಲಿ)

| 1) 288 ಮೀನು ಕೃಷಿಕರಿಗೆ 15 ದಿನಗಳ ತರಬೇತಿ | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು |
|---|---|---|---|
| a) ಶಿಷ್ಯ/ವೃತ್ತಿ ವೇತನ ಓರ್ವ ಮೀನು ಕೃಷಿಕನಿಗೆ ದಿನ ಒಂದಕ್ಕೆ ರೂ.125-00ರಂತೆ 15 ದಿನಗಳಿಗೆ (ರೂ.125 x 15 x 288) | 4.320 | 1.080 | 5.40 |
| b) ಪ್ರಯಾಣ ಭತ್ಯೆಗಾಗಿ 288 ಮೀನು ಕೃಷಿಕರಿಗೆ ರೂ.500-00ರಂತೆ (ರೂ.500 x 288) | 1.152 | 0.288 | 1.44 |
| c) ಗೌರವಧನ ರೂ.1000-00ದಂತೆ 3 ಜನ ಸಂಪನ್ಮೂಲ ವ್ಯಕ್ತಿಗಳಿಗೆ (ರೂ.1000 X 3) | 0.024 | 0.006 | 0.03 |
| d) 3 ಜನ ಸಂಪನ್ಮೂಲ ವ್ಯಕ್ತಿಗಳಿಗೆ ಪ್ರಯಾಣಭತ್ಯೆ ಪ್ರತಿ ಉಪನ್ಯಾಸಕ್ಕೆ ರೂ.1000-00 ದಂತೆ | 0.024 | 0.006 | 0.03 |
| 2) ಮೀನುಗಾರಿಕೆಗೆ ಸಂಬಂಧಿಸಿದ ನಾಲ್ಕು ಕೈಪಿಡಿ (ಪುಸ್ತಕ)ಗಳನ್ನು ಪ್ರಕಟಿಸಲು ತಲಾ ರೂ.65,000-00ಗಳ ವೆಚ್ಚದಲ್ಲಿ | 2.08 | 0.52 | 2.60 |
| 3) ರಾಜ್ಯ ಮಟ್ಟದ ಒಂದು ಕಾರ್ಯಾಗಾರ/ಸೆಮಿನಾರ್ ಏರ್ಪಡಿಸುವುದು | 0.40 | 0.10 | 0.50 |
| ಒಟ್ಟು | 8.00 | 2.00 | 10.00 |

-2-

ಸದರಿ ಯೋಜನೆಯಡಿ ರಾಜ್ಯದಲ್ಲಿರುವ ಮೀನು ಕೃಷಿಕರಿಗೆ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳಲ್ಲಿ ಹಾಗೂ ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಯಲ್ಲಿ ತರಬೇತಿ ನೀಡಲು ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಸದರಿ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರು ರಾಜ್ಯ ಹುಜೂರ್ ಖಜಾನೆಯಿಂದ ತೆಗೆದು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇಲ್ಲಿ ಠೇವಣೆಯಿರಿಸಿ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರಿಗೆ ಅನುಮತಿ ನೀಡಿದೆ.

ಸದರಿ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಲೆಕ್ಕ ಶೀರ್ಷಿಕೆ "2405–ಮೀನುಗಾರಿಕೆ–00–109–ವಿಸ್ತರಣೆ ಮತ್ತು ತರಬೇತಿ–0–07–ಕೇಂದ್ರ ಪುರಸ್ಕೃತ ಯೋಜನೆ ತರಬೇತಿ ಮತ್ತು ವಿಸ್ತರಣೆ–015 ಪೂರಕ ವೆಚ್ಚಗಳು (ಯೋಜನೆ)" ಅಡಿ ಲಭ್ಯವಿರುವ ಒಟ್ಟು ರೂ.10.00 ಲಕ್ಷ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಪಸಂಮೀ/65/ಆಂಆಸ/2010 ದಿನಾಂಕ:03–12–2010ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಂ.ರಾಜಣ್ಣ) 21/12/10

ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀನುಗಾರಿಕೆ)

ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು
3) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರು – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
6) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಸಂಬಂಧಪಟ್ಟ ಮೀನು ಕೃಷಿಕರ/ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳು – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8) ಶಾಖಾ ರಕ್ಷಾ ಕಡತ:ಹೆಚ್ಚಿನ ಪ್ರತಿಗಳು.